ದಿನಾಂಕ **19-01-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ಶ್ರೀ ಡಿ ಪಿ ಟಿ ವಾದಿ ಪರ ವಕೀಲರಿಂದ -

ನಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮುಗಿದಿದೆ ಎಂದರೆ ಸರಿ . ಆರ್ ಎ 20/2012 ಮುಕ್ತಾಯವಾಗಿ 4 ತಿಂಗಳು ಆಗಿರುತ್ತದೆ . ಸದ್ರಿ ಅಪೀಲು ದಿನಾಂಕ 14-09-2022 ರಂದು ಮುಕ್ತಾಯವಾಗಿರುತ್ತದೆ ಎಂದರೆ ಸರಿ . ವಾದಿಯರಿಗೆ ಪಾಲು ಕೊಡಬೇಕಾಗುತ್ತದೆ ಎಂದು ಈ ದಾಖಲೆಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ-44 ರ ಮೌಲ್ಯ ಮಾಪನದಲ್ಲಿ ಮರಡಿ ಜಮೀನಿನ ಪ್ರತಿ ಎಕರೆಯ ಬೆಲೆ ರೂ. 2,10,000-00 ಎಂದು ನಮೂದು ಇದೆ ಎಂದರೆ ಸರಿ . ವಾದಿಯರು ಈ ದಾವೆಯನ್ನು 2015 ರಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿ . ಈಗಾಗಲೇ ವಾದಿಯರು ಮಾರುಕಟ್ಟೆ ಬೆಲೆಯ ಪ್ರಮಾಣ ಪತ್ರವನ್ನು ನಿ.ಪಿ-19 ರಂತೆ ಸಲ್ಲಿಸಿರುತ್ತಾರೆ ಎಂದರೆ ಇರಬಹುದು. ಸದ್ರಿ ದಾಖಲೆಯನ್ನು ನೋಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾವು ಸಲ್ಲಿಸಿರುವ ಮಾರುಕಟ್ಟೆ ಬೆಲೆಯ ಪ್ರಮಾಣ ಪತ್ರ 2018-19 ನೇ ಸಾಲಿನದು ಎಂದರೆ ಸರಿ . ವಾದಿಯರು ಸಲ್ಲಿಸಿದ ಮಾರುಕಟ್ಟೆಯ ಬೆಲೆಯ ಪ್ರಮಾಣ ಪತ್ರ 2015-16 ನೇ ಸಾಲಿನದು ಎಂದರೆ ಸರಿ . ಅದರಲ್ಲಿ ಮರಡಿ ಜಮೀನಿನ ಪ್ರತಿ ಎಕರೆಯ ಬೆಲೆ ರೂ. 1,40,000-00 ಎಂದು ನಮೂದು ಇದೆ ಎಂದರೆ ಇರಬಹುದು . ಮಾರುಕಟ್ಟೆಯ ಬೆಲೆ ಪ್ರತಿವರ್ಷ ಹೆಚ್ಚಾಗುತ್ತದೆ ಎಂದರೆ ಸರಿ . ದಾವಾ ಜಮೀನುಗಳು ಮರಡಿ ಜಮೀನುಗಳು ಎಂದರೆ ಸರಿ .

ಮನೆ ಬಾಳಪ್ಪನ ಪಾಲಿನ ಜಮೀನಿನಲ್ಲಿ ಕಟ್ಟಿದ್ದಾರೆ ಎಂದರೆ ಸರಿ . ಈಗ ದಾವಾ ಜಮಿನಿನಲ್ಲಿ ಕಬ್ಬು ಇತ್ತು. ಅದನ್ನು ಕಟಾವು ಮಾಡಿರುತ್ತೇವೆ. ಕಬ್ಬನ್ನು ಸತೀಶ ಸಕ್ಕರೆ ಕಾರಖಾನೆಗೆ ಕಳುಹಿಸಿರುತ್ತೇವೆ. ಒಟ್ಟು 50 ಟನ್ ಕಬ್ಬು ಆಗಿರುತ್ತದೆ. ಇತ್ತೀಚೆಗೆ ವಾದಿಯರಿಗೆ ಧಮಕಿ ಹಾಕಿ ಅವರ ಪಾಲಿನ ಜಮೀನನ್ನು ನಾವೇ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಅದು ನಮ್ಮ ಕಬ್ಜಾದಲ್ಲಿರುತ್ತದೆ.

ಅಸಲು ದವೆ ನಂ. 64/2003 ರ ದಾವೆ 1 ನೇ ವಾದಿ ಮತ್ತು ಆತನ ಸಹೋದರಿಯರು ನಮ್ಮ ಮಾವ ಬಾಳಪ್ಪನ ಮೇಲೆ ಮಾಡಿದ್ದರು ಎಂದರೆ ಸರಿ . ಸದ್ರಿ ದಾವೆಯನ್ನು ವಾದಿಯರ ತಂದೆಯ ಪಾಲಿನ ಆಸ್ತಿಯ ಘೋಷಣೆಗಾಗಿ ಮಾಡಿದ್ದರು

ಎಂದರೆ ನನಗೆ ಗೊತ್ತಿಲ್ಲ. ಈ ಕೇಸನ್ನು ವಾದಿಯರು ತಮ್ಮ ತಂದೆಯವರ ಪಾಲು ಕೋರಿ ಹೂಡಿರುತ್ತಾರೆ ಎಂದರೆ ಸರಿ .

ಪಾಟಿ ಸವಾಲು ಃ ಶ್ರೀ ಎಸ್ ಎಸ್ ಎಸ್ 7 ನೇ ಪ್ರತಿವಾದಿ ಪರ ವಕೀಲರಿಂದ -

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅಳವಡಿಸಿಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ